

ಜಾಣರ ಪೆಟ್ಟಿಗೆ

## ಚಾರು ಟ್ರೆಂಡ್

ಝೀ ಕನ್ನಡದ 'ಮೇಘ ಮಯೂರಿ'ಯಲ್ಲಿ 'ಚಾರು'ಳ ಉಡುಗೆ ತೊಡುಗೆ ವಿಶಿಷ್ಟತೆಯಿಂದ ಕೂಡಿದೆ. ಅವಳು ಧರಿಸುವ ಚೂಡಿದಾರ್ ಟಾಪ್ ಪಾದವನ್ನು ಸ್ಪರ್ಶಿಸುವಂತಿದೆ. ಈಗ ಇದೊಂದು ಟ್ರೆಂಡ್ ಆಗಿ 'ಚಾರು'ವಿನಂತೆ ಉದ್ದ ಟಾಪ್ ಧರಿಸುವುದನ್ನು ಕಾಣಬಹುದು. ಇದು ಒಂದು ರೀತಿ ಯಕ್ಷಗಾನ ವೇಷ, ಮೈಲಾರ ಕುಣಿತ, ಹಿಡಿಂಬೆ ವೇಷ ನೆನಪಿಗೆ ತಂದು ದೈವಿ ಭಾವನೆ ಮೂಡಿಸುವಂತಿದೆ!

-ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

## ಜ್ಞಾನದಾಸೋಹ

2500 ಕಂತುಗಳನ್ನು ಪೂರೈಸಿ, ಇನ್ನೂ ಅದೇ ಉತ್ಸಾಹದಲ್ಲಿ ಮುಂದುವರಿಯುತ್ತಿರುವ ಚಂದನವಾಹಿನಿಯ 'ಥಟ್ ಅಂತ ಹೇಳಿ' ಕಾರ್ಯಕ್ರಮಕ್ಕೆ ಅಭಿನಂದನೆಗಳು.

ಅಸಂಬದ್ಧ, ಅನಾಚಾರದ ಕಾರ್ಯಗಳಿಂದ ವಿಜೃಂಭಿಸುವ ಹೆಂಗಳೆಯರ ಕಣ್ಣೀರ ಧಾರೆಯ ಧಾರಾವಾಹಿಗಳು, ಕನ್ನಡ ಸಂಸ್ಕೃತಿಯನ್ನು ಕಡೆಗಣಿಸಲೆಂದೇ ಹುಟ್ಟಿಕೊಂಡಂತಿರುವ ವಿಕೃತ ರಿಯಾಲಿಟಿ ಶೋಗಳ ಮಧ್ಯದಲ್ಲಿ ಮೌಲ್ಯಾಧಾರಿತ ಕಾರ್ಯಕ್ರಮಗಳಿಗೆ ಹಪಾಹಪಿಸುವ ವೀಕ್ಷಕರಿಗೆ ಸಿಹಿಯಾದ 'ಥಟ್ ಅಂತ ಹೇಳಿ' ಕಾರ್ಯಕ್ರಮ 'ಜ್ಞಾನದಾಸೋಹ' ಮಾಡುತ್ತಿದೆ. ಪುಟ್ಟ ಪುಟ್ಟ ಪ್ರಶ್ನೆಗಳಿಂದ ಇಡೀ ಜಗತ್ತನ್ನೇ ನಮ್ಮೆದುರು ತೆರೆದಿಡುವ ನಾ.ಸೋಮೇಶ್ವರ ಮತ್ತು ಅವರ ತಂಡದ ಪರಿಶ್ರಮ ಶ್ಲಾಘನಾರ್ಹ.

-ಎಸ್.ಪಿ.ವಿಜಯಲಕ್ಷ್ಮಿ ಬೆಂಗಳೂರು, ಶಶಿಕಲಾ ನಾಡಿಗೇರ, ದಾವಣಗೆರೆ

## ರೈತರಿಗೆ ದಾರಿದೀಪ

ಡಿಡಿ ಚಂದನದಲ್ಲಿ ಸೋಮವಾರದಿಂದ ಶುಕ್ರವಾರದವರೆಗೆ ಪ್ರಸಾರವಾಗುವ ಕೃಷಿ ದರ್ಶನ ಕಾರ್ಯಕ್ರಮ ರೈತಾಪಿ ಜನರಿಗೆ ದಾರಿದೀಪವಾಗಿದೆ. ಕೃಷಿ ದರ್ಶನದಲ್ಲಿ ಕೃಷಿ ಚಟುವಟಿಕೆಗಳನ್ನು ನಮ್ಮ ರೈತರು ತಮ್ಮ ಕೃಷಿಯಲ್ಲಿ ಅಳವಡಿಸಿಕೊಳ್ಳಲು ಅನುಕೂಲ ಆಗುವಂತೆ ತಿಳಿಸಿ ಕೊಡಲಾಗುತ್ತದೆ. ಇದರಿಂದ ಅವರು ತಮ್ಮ ಕಾಯಕದಲ್ಲಿ ಸುಧಾರಣೆಯನ್ನೂ ಕಂಡುಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ನಡೆಸಿಕೊಡುವ ಚಂದನ ವಾಹಿನಿಗೆ ನನ್ನ ವಂದನೆಗಳು.

-ಮಸ್ತಾನ್ ನೂರಪ್ಪನವರ, ಶಿರಗುಪ್ಪಿ

## ವಾರದ ಪತ್ರ — ಲೈಂಗಿಕ ಅರಿವು ಮೂಡಿಸಲಿ

ಮುಗ್ಧ ಕಂದಮ್ಮಗಳ ಮೇಲೆ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು ಸಾರ್ವಜನಿಕರನ್ನು ಬೆಚ್ಚಿ ಬೀಳಿಸುತ್ತಿವೆ.

ಮಕ್ಕಳಿಗೆ ಬಾಲ್ಯದಿಂದಲೇ ಪ್ರಾಥಮಿಕ ಲೈಂಗಿಕ ಶಿಕ್ಷಣ, ದೇಹದ ಅಂಗಾಂಗಗಳ ಕೆಟ್ಟ ಸ್ಪರ್ಶ, ಒಳ್ಳೆಯ ಸ್ಪರ್ಶಗಳ ಬಗ್ಗೆ ಅರಿವು ಮೂಡಿಸುವ ಅಮೀರ್‌ಖಾನ್‌ರ 'ಸತ್ಯಮೇವ ಜಯತೆ' ಎಂಬ ಉತ್ತಮ ಕಾರ್ಯಕ್ರಮ ಡಬ್ಬಿಂಗ್ ವಿರೋಧದಿಂದಾಗಿ ಕನ್ನಡದಲ್ಲಿ ಪ್ರಸಾರವಾಗದಿದ್ದುದು ವಿಪರ್ಯಾಸ.

ಲೈಂಗಿಕ ಶೋಷಣೆಯ ವಿರುದ್ಧ ಮಕ್ಕಳ ಹಕ್ಕುಗಳು, ತಪ್ಪು– ಒಪ್ಪುಗಳ ಅರಿವು, ಶಿಕ್ಷಕರು, ಪೋಷಕರು ಸೇರಿದಂತೆ ಸಮಸ್ತ ನಾಗರಿಕರ ನೈತಿಕ ಜವಾಬ್ದಾರಿ ಹಾಗೂ ಕರ್ತವ್ಯದ ಬಗ್ಗೆ ಹಲವು ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾಗಿವೆ. ದೃಶ್ಯ ಮಾಧ್ಯಮದಲ್ಲಿ ಈಗಾಗಲೇ ಪ್ರಸಾರವಾಗುತ್ತಿರುವ ಹೆಣ್ಣುಮಕ್ಕಳ ಶಿಕ್ಷಣ ಅಭಿಯಾನದ ಜಾಹೀರಾತಿನ ಜೊತೆಗೆ ಈ ಲೇಖನಗಳ ಮುಖ್ಯಾಂಶಗಳನ್ನು ಜಾಹೀರಾತು, ಕಿರುಚಿತ್ರಗಳ ಮೂಲಕ ಪ್ರದರ್ಶಿಸಬೇಕು. ಆಗ ಪತ್ರಿಕೆ ಓದದ (ಆದರೆ ಟಿ.ವಿ. ನೋಡುವ) ಹಿರಿಯರು ಮತ್ತು ಮಕ್ಕಳು ಅವುಗಳ ಬಗ್ಗೆ ಮಾಹಿತಿ ಪಡೆಯುವುದು ಸುಲಭ ಸಾಧ್ಯ.

-ಮೀರಾ ಮೋಹನ್, ಬೆಂಗಳೂರು

## ದುಬಾರಿ ಬಿಗ್‌ಬಾಸ್

ಸುವರ್ಣದಲ್ಲಿ ಪ್ರಸಾರವಾಗುವ 'ಬಿಗ್‌ಬಾಸ್' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಒಬ್ಬ ನಟ ವೈಯಕ್ತಿಕ ಜೀವನದಲ್ಲಿ ಯಾವ ರೀತಿಯ ಮುಖವಾಡ ಧರಿಸಿರುತ್ತಾನೆ ಎಂಬುದನ್ನು ಈ ಶೋ ಜನರ ಮುಂದೆ ತೆರೆದಿಟ್ಟಿದೆ. ಈ ಬಿಗ್‌ಬಾಸ್ ಮನೆಯಲ್ಲಿ ಸೆಲೆಬ್ರಿಟಿಗಳಿಗೆ ಊಹಿಸಲಾಗದಷ್ಟು ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಇಂತಹ ರಿಯಾಲಿಟಿ ಶೋಗಳಿಗೆ ಜನಸಾಮಾನ್ಯರಿಗೆ ಯಾಕೆ ಪ್ರವೇಶವಿಲ್ಲ? ಸಿನಿಮಾ– ಕಿರುತೆರೆಯ ಸೆಲೆಬ್ರೆಟಿಗಳಿಗೆ ಮಾತ್ರ ಅವಕಾಶವೇಕೆ? ಇವರ ಹೊರತಾಗಿ ಬೇರೆ ಬೇರೆ ಕ್ಷೇತ್ರಗಳ ಸಾಧಕರು ಸೆಲೆಬ್ರಿಟಿಗಳು ಆಗುವುದಿಲ್ಲವಾ?

-ಶ್ರುತಿ ನೀರಾಯ (ಗುಂಡ್ಯ), ಪ್ರಿಯದರ್ಶಿನಿ ಕೆ, ಉಜಿರೆ

## ಅಸಂಬದ್ಧತೆ ನಿಲ್ಲಲಿ

ಆಗ 'ಶುಭ ಮಂಗಳ' ಧಾರಾವಾಹಿಯಲ್ಲಿ 'ಮಾಯಿ' ಎಂಬ ರಾಕ್ಷಸಿಯ ಕಾಟದಲ್ಲಿ ನಾಟಕಗಳು ನಡೆದು, ಮಾಯಿ ಯಾವ ಶಿಕ್ಷೆಯಿಲ್ಲದೇ ಪಾರಾಗಿ ಹೋದಳು.

ಈಗ 'ಅಶ್ವಿನಿ ನಕ್ಷತ್ರ'ದ 'ಆಯಿ' ಕೂಡ ಸಹ ಕಲಾವಿದರನ್ನು ತನ್ನ ಇಷ್ಟಬಂದ ಹಾಗೆ ಕುಣಿಸಿಕೊಂಡು, ಕೊನೆಗೆ ಶಿಕ್ಷೆ ಇಲ್ಲದೆ ತಾನೊಂದು ಆದರ್ಶ ಮಹಿಳೆಯೆಂಬ ಸೋಗಿನಲ್ಲಿ ಪಾರಾಗಿ ಹೋಗುವಳೇ ಎಂದು ಸಂಶಯ ಉಂಟಾಗುತ್ತಿದೆ. ಮತ್ಸರ ಗುಣದ ಅಸಂಬದ್ಧ ಕುಣಿತವನ್ನು ನಿಲ್ಲಿಸಿ.

-ಎಂ.ಆರ್.ಮುಕುಂದ, ಬೆಂಗಳೂರು

## ಅಂಚೆ ಇಲಾಖೆಯ ಅವಗಣನೆ

ಸುಮಾರು 150 ವರ್ಷಗಳಷ್ಟು ಹಿಂದಿನಿಂದ ಅಂಚೆ ಇಲಾಖೆ ತನ್ನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆ. ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನೂ, ದೇಶದ ಯಾವುದೇ ಮೂಲೆಯಲ್ಲಿದ್ದರೂ ಅವನ ಜೊತೆ ಸಂಬಂಧದ ಬೆಸುಗೆಯನ್ನು ಹಾಕುತ್ತಿದೆ. ಆದರೆ ದೃಶ್ಯ ಮಾಧ್ಯಮಗಳು ಅಂಚೆ ಇಲಾಖೆಯನ್ನು ತಮ್ಮ ಕಥೆಯಲ್ಲಿ ಚಿತ್ರಿಸುವುದಿಲ್ಲ. ಯಾವುದೇ ಧಾರಾವಾಹಿ ನೋಡಿದರೂ 'ಕೊರಿಯರ್' ಎಂಬ ಶಬ್ದ ಬಳಸುತ್ತಾರೆಯೇ ಹೊರತು ಅಂಚೆ ಅಥವಾ ಪೋಸ್ಟ್ ಎಂಬ ಪದ ಬಳಕೆಯಾಗುವುದಿಲ್ಲ. ಏಕೆ ನಮ್ಮ ಅಂಚೆ ಇಲಾಖೆಗೆ ಇಂತಹ ಅನ್ಯಾಯ?

-ಹೇಮಲತಾ ಸುಬ್ರಹ್ಮಣ್ಯ, ಹಾಲ್ಮುತ್ತೂರು

## ಕುತೂಹಲಕಾರಿಯಾದ ಮಹಾಪರ್ವ

ಸ್ವಲ್ಪ ದಿನ ಯಾಕೋ ಮಹಾಪರ್ವ ಬೇಸರ ತರಿಸುತಿತ್ತು. ಆದರೆ ಈಗ ಕುತೂಹಲವಾಗುತ್ತಿದೆ. ಗೌರಿ ವಿಭಾವರಿಯ ವಿಚಾರ ಬದಲಾಗಿ ಚಿಂತಾದ್ರಿಯ ಬಣ್ಣ ಬಯಲಾಗಿದೆ. ಗೌರಿ ಅವನನ್ನು ಹೇಗೆ ಬಂಧಿಸಲು ಸಹಾಯವಾಗುತ್ತಾಳೆ ಎಂಬ ಕುತೂಹಲ ಮೂಡಿಸಿದೆ. ಗೌರಿ ರವಿಶಂಕರನನ್ನು ಮದುವೆಯಾದರೆ ಒಳ್ಳೆಯದು. ನಿರ್ದೇಶಕರು ಅವರ ಮದುವೆಯನ್ನು ತಪ್ಪಿಸಿಬಿಡುತ್ತಾರಾ ಎಂಬ ಆತಂಕವೂ ಇದೆ.

-ಕೆಕ್ಕಾರ. ಎಸ್.ಎ. ಭಟ್ಟ, ಕುಮುಟ

## ಮೌಢ್ಯ ವಿರೋಧ

ಆದಿತ್ಯ ಮತ್ತು ಯಶೋದಾ ಅವರ ನಿಶ್ಚಿತಾರ್ಥದ ಸಮಯದಲ್ಲಿ ಯಶೋದೆಗೆ ಕೊಟ್ಟಿದ್ದ ನಿಶ್ಚಿತಾರ್ಥದ ಸೀರೆ ಬೆಂಕಿಯಲ್ಲಿ ಸುಟ್ಟುಹೋಗುತ್ತದೆ. ಆಗ ಆದಿತ್ಯನ ತಾಯಿ ಮತ್ತು ಅವರ ಸಂಬಂಧಿಕರು ಇದು ಅಪಶಕುನವೆಂದೂ ನಿಶ್ಚಿತಾರ್ಥವನ್ನು ರದ್ದುಗೊಳಿಸಬೇಕೆಂದೂ ಹೇಳುತ್ತಾರೆ. ಆದರೆ ಆದಿತ್ಯ ಇದನ್ನು ವಿರೋಧಿಸಿ, ಇದು ಅವರವರ ಮನಸ್ಸಿಗೆ ಸಂಬಂಧಪಟ್ಟ ವಿಷಯ, ಕಾರ್ಯಕ್ರಮ ನಡೆಯಲಿ ಎಂದು ಹೇಳುತ್ತಾನೆ.

ಮೂಢ ನಂಬಿಕೆಗಳನ್ನು ವಿರೋಧಿಸಿದ ಆದಿತ್ಯನ ನಡೆ ಅನುಕರಣೀಯ.

-ಸಿ.ಎಸ್. ಗೋಪಾಲಕೃಷ್ಣ, ಮೈಸೂರು